
# ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ



ಸಂಪಾದಕರು

ಡಾ. ವಿದ್ಯಾವತಿ ರಜಪೂತ

ಡಾ. ಎಸ್. ಟಿ. ಮೇರವಾಡೆ

ಡಾ. ಆರ್. ವಿ. ಪಾಟೀಲ

# ಪತ್ರಿಕೋದ್ಯಮ ಸಾಹಿತ್ಯ ಹಾಗೂ ರಾಷ್ಟ್ರೀಯತೆ

(ದೆಹಲಿ ವಿಶ್ವವಿದ್ಯಾಲಯದ ಪಿ.ಜಿ.ಡಿ.ಎ.ವಿ. ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ)

ಸಂಪಾದಕರು

ಡಾ. ವಿದ್ಯಾವತಿ ರಜಪೂತ

ಡಾ. ಎಸ್. ಟಿ. ಮೇರವಾಡೆ

ಡಾ. ಆರ್. ವಿ. ಪಾಟೀಲ

೨೦೧೮

ಪ್ರಕಾಶಕರು

ಸೌಮ್ಯ ಪ್ರಕಾಶನ, ವಿಜಯಪುರ

**PATRIKODYAMA, SAHITYA HAAGU RASHTRIYATE :**

Editor : Dr. Vidyavati Rajaput - K.L.E. S.K. Arts & H.S.K. Science College, Hubli

Dr. S. T. Merwade - B.L.D. E., S.B. Arts & K.C.P Science College, Vijaypur

Dr. R. V. Patil - J. S. S. Degree College - Vidhyagiri, Dharwad

Publisher : Soumya Prakashan **BJP-F-27-2012-13**
Mahabaleswar Colony, Vijayapur

First Edition : 2018

© : Publisher

Copies : 100

Pages : xii - 112 = 124

Price : **Rs. 50/-**

Book Size : Demy 1/8

Paper Used : 70 GSM N.S. Maplitho

ISBN : 978-93-83813-40-7

**ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ :**

ಸಂಪಾದಕರು : ಡಾ. ವಿದ್ಯಾವತಿ ರಜಪೂತ
ಡಾ. ಎಸ್. ಟಿ. ಮೇರವಾಡೆ
ಡಾ. ಆರ್. ವಿ. ಪಾಟೀಲ

ಪ್ರಕಾಶಕರು : ಸೌಮ್ಯ ಪ್ರಕಾಶನ ಬಿಜೆಪಿ-ಎಫ್-೨೭-೨೦೧೨-೧೩
ಮಹಾಬಳೇಶ್ವರ ಕಾಲೋನಿ, ವಿಜಯಪುರ

ಮೊದಲ ಮುದ್ರಣ : ೨೦೧೮

ಹಕ್ಕುಗಳು : ಪ್ರಕಾಶಕರವು

ಪ್ರತಿಗಳು : ೧೦೦

ಪುಟಗಳು : xii - ೧೧೨ = ೧೨೪

ಬೆಲೆ : ರೂ. ೫೦/-

ಪುಸ್ತಕದ ಆಕಾರ : ಡೆಮಿ ೧/೮

ಬಳಸಿದ ಕಾಗದ : ೭೦ ಜಿ.ಎಸ್.ಎಮ್. ಎನ್.ಎಸ್.ಮ್ಯಾಪಲಿಥೋ

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ – 582 101
Email : chaitanyaoffset@gmail.com
Mobile : 8884495331, 9448223602

## ಪರಿವಿಡಿ

೧. ಪತ್ರಿಕೆಗಳ ಸ್ಥಿತಿ-ಗತಿ ೧
• ಡಾ. ಬಸವರಾಜ ಜಗಜಂಪಿ

೨. ರಾಷ್ಟ್ರೀಯತೆ ಮತ್ತು ಪಂಡಿತ ದೀನದಯಾಳ ಉಪಾಧ್ಯಾಯ ೪
• ಡಾ. ಎಸ್. ಟಿ. ಮೇರವಾಡೆ

೩. ಮಾಧ್ಯಮಲೋಕ ೯
• ಡಾ. ವಿ. ಎಸ್. ಮಾಳಿ

೪. ಹಿಂದಿ ಪತ್ರಿಕೋದ್ಯಮ : ಪಂ. ದೀನದಯಾಳ ಉಪಾಧ್ಯಾಯ ೧೨
• ಡಾ. ವಿದ್ಯಾವತಿ ಜಿ. ರಜಪೂತ

೫. ಕನ್ನಡ ಸಾಹಿತ್ಯ - ಮುದ್ರಣ ಹಾಗೂ ಮಾಧ್ಯಮಗಳು ೧೪
• ಡಾ. ಜಿನದತ್ತ ಅ. ಹಡಗಲಿ

೬. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಪತ್ರಿಕೋದ್ಯಮ ೧೭
• ಪ್ರೊ. ಬಿ. ಬಿ. ಡೆಂಗನವರ

೭. ಸ್ವಾಮಿ ವಿವೇಕಾನಂದರ ಉಪನ್ಯಾಸಗಳು ಹಾಗೂ ರಾಷ್ಟ್ರಧರ್ಮ ೨೫
• ಡಾ. ಆರ್. ವಿ. ಪಾಟೀಲ

೮. ಸುಭದ್ರಾಕುಮಾರಿ ಚೌಹಾನ ಅವರ ಕಾವ್ಯದಲ್ಲಿ ರಾಷ್ಟ್ರೀಯತೆ ೩೮
• ಡಾ. ಎಸ್. ಜೆ. ಜಹಾಗೀರದಾರ

೯. ಬಸವರಾಜ ಕಟ್ಟೀಮನಿಯವರ ಕಥೆಗಳು ಮತ್ತು ರಾಷ್ಟ್ರ ಪ್ರಜ್ಞೆ ೪೧
• ಡಾ. ಎಂ. ಎಸ್. ಮಾಗಣಗೇರಿ

೧೦. ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ ೫೦
• ಪ್ರೊ. ರಮೇಶ ಮ. ಕಲ್ಲನಗೌಡರ

೧೧. ಭಾರತೀಯ ಇಂಗ್ಲೀಷ ಕಾವ್ಯ ಪರಂಪರೆಯಲ್ಲಿ ರಾಷ್ಟ್ರೀಯತೆ ೫೬
- ಗುರು ಗ. ಪಾಟೀಲ

೧೨. ದೇಸಿಯತೆ ಮತ್ತು ರಾಷ್ಟ್ರೀಯತೆಯ ನೆಲೆಯಲ್ಲಿ ಮಾಧ್ಯಮ ೬೧
- ಡಾ. ಆನಂದಪ್ಪ ಬಿ. ಎಚ್.

೧೩. ಪತ್ರಿಕೋದ್ಯಮ : ಸಮಾಜದ ಒಂದು ಕೈಗನ್ನಡಿ ೬೭
- ಶ್ರೀ. ಆನಂದ ಈಶ್ವರ ಲಗಳಿ

೧೪. ಜನಪದ ಸಮಾಜ, ಸಂಸ್ಕೃತಿ ಮತ್ತು ಮಹಿಳೆ ೭೫
- ಡಾ. ಸವಿತಾ ಎಂ. ಝುಳಕಿ

೧೫. ಭಾರತದಲ್ಲಿ ಪತ್ರಿಕೋದ್ಯಮ ಮತ್ತು ರಾಷ್ಟ್ರೀಯತೆ ೮೩
- ಸುಶೀಲಾದೇವಿ ಬಿ. ಬೆಟಗೇರಿ

೧೬. ರಾಷ್ಟ್ರೀಯತೆ ಭಾಷೆ – ಶಿಕ್ಷಣ ೮೮
- ಪ್ರೊ. ದೀಪಾ ಸಂಕಪಾಳೆ

೧೭. ಪತ್ರಿಕೋದ್ಯಮದಲ್ಲಿ ರಾಷ್ಟ್ರೀಯತೆಯ ಸಂಬಂಧ ೯೨
- ಪ್ರೊ. ನೇತ್ರಾವತಿ ಗಬ್ಬೂರ

೧೮. ಕನ್ನಡ ಸಾಹಿತ್ಯದಲ್ಲಿ ಆಧುನಿಕರಣ ಮತ್ತು ಮೌಲ್ಯಗಳ ಸಂಘರ್ಷ ೯೭
- ಸುಧಾಕುಮಾರಿ ಕೆ

೧೯. ಶಿಕ್ಷಣ ಮತ್ತು ರಾಷ್ಟ್ರವಾದ ೧೦೩
- ಪ್ರೊ. ಬಿ. ಎಚ್. ಬುಳ್ಳಣ್ಣವರ

೨೦. ರಾಷ್ಟ್ರೀಯತೆ ಮತ್ತು ಇತರ ಭಾಷಾವಿಜ್ಞಾನದ ಮೂಲಗಳು ೧೦೬
- ರುಕ್ಮೀಣಿ ಬಿ. ಪಾಂಡ್ಪರೆ

# ರಾಷ್ಟ್ರೀಯತೆ ಮತ್ತು ಪಂಡಿತ ದೀನದಯಾಳ ಉಪಾಧ್ಯಾಯ

• ಡಾ. ಎಸ್. ಟಿ. ಮೇರವಾಡೆ

ಲಂಕೆಯ ಮೇಲೆ ವಿಜಯ ಸಾಧಿಸಿದ ನಂತರ ಲಕ್ಷ್ಮಣ ತನ್ನ ಹಿರಿಯ ಸಹೋದರ ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರನಿಗೆ ಇನ್ನು ಕೆಲವು ದಿನಗಳ ಕಾಲ ಸ್ವರ್ಣನಗರಿ ಲಂಕೆಯಂತಹ ರಮಣೀಯವಾದ ಸ್ಥಳಗಳಲ್ಲಿ ವಾಸಿಸುವ ಮಾತಿಗೆ ಶ್ರೀ ರಾಮಚಂದ್ರ ಹೇಳುತ್ತಾನೆ

"ಅಪಿ ಸ್ವರ್ಣಮಯಿ ಲಂಕಾ ನ ಮೆ ಲಕ್ಷ್ಮಣ ರೋಚತೆ ।
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ॥"

ಅಂದರೆ - ಹೇ ಲಕ್ಷ್ಮಣ, ಬಂಗಾರದಂತಹ ಲಂಕೆಯು ನನಗೆ ಹಿಡಿಸುವುದಿಲ್ಲ. ತಾಯಿ ಹಾಗೂ ಮಾತೃಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾಗಿರುತ್ತದೆ. ಮಾತೃಭೂಮಿಯ ಕಲ್ಪನೆ ಎಲ್ಲ ಭಾರತೀಯರ ಮಾನಸ ಪಟಲದಲ್ಲಿ ಅಚ್ಚಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ರಾಷ್ಟ್ರೀಯತೆಯ ಬೇರು ಯುಗ-ಯುಗಗಳಿಂದ ಪಸರಿಸಿವೆ. ಭಾರತವು ಒಂದು ಸಾಂಸ್ಕೃತಿಕ, ಧಾರ್ಮಿಕ ಮತ್ತು ಅನೇಕ ಭಾಷೆಗಳ ವಿವಿಧತೆಯ ದೇಶವಾಗಿದೆ. ವಿಭಿನ್ನ ಸಂಸ್ಕೃತಿ ಹಾಗೂ ಜಾತಿಯ ವಿವಿಧ ನೆಲೆಯಲ್ಲಿ ಇದ್ದರೂ ರಾಷ್ಟ್ರೀಯತೆ ಒಂದೆ ದಾರದಲ್ಲಿ ಪೋಣಿಸಲಾಗಿದೆ. ಇದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಎಲ್ಲ ಭಾರತೀಯರಿಗೆ ಒಂದು ಗೂಡಿಸುವ ಮಹತ್ವಪೂರ್ಣ ಕಾರ್ಯ ಮಾಡಿದೆ. ಭಾರತೀಯ ಸಂದರ್ಭದಲ್ಲಿ ರಾಷ್ಟ್ರೀಯತೆ ಅರ್ಥ, ರಾಷ್ಟ್ರದ ಪ್ರತಿಯೊಂದು ಸಂಬಂಧ ಹೊಂದುವಂತದ್ದಾಗುತ್ತದೆ. ರಾಷ್ಟ್ರದ ಜೊತೆ ಅನ್ಯೋನ್ಯವಾದ ಸಂಬಂಧ ಹೊಂದುವದು ನಮ್ಮ ಸಂಸ್ಕೃತಿಯಲ್ಲಿ ಮೈಗೂಡಿಸಿಕೊಂಡಿದೆ. ರಾಷ್ಟ್ರೀಯತೆ ವಿಶಿಷ್ಟವಾದ ಒಂದು ವಸ್ತುವಿನಂತೆ. ಅದರಲ್ಲಿ ಎಲ್ಲವೂ ಇದೆ. ಅದಕ್ಕಾಗಿ ರಾಷ್ಟ್ರೀಯತೆಗೆ ಎಲ್ಲದರಕ್ಕಿಂತಲೂ ಹೆಚ್ಚಿನ ಗೌರವ ಕೊಡಲಾಗುತ್ತದೆ. ಯಾವುದೇ ದೇಶದ ನಾಗರಿಕರಿಗೆ ಅವರ ರಾಷ್ಟ್ರೀಯತೆಯಿಂದಲೇ ಗುರ್ತಿಸಲ್ಪಡುತ್ತದೆ. ಯಾವುದೆ ದೇಶದ ಪ್ರಗತಿ ಹಾಗೂ ಸಂಪನ್ಮೂಲ ಆದೇಶದ ನಾಗರಿಕತೆಯಲ್ಲಿಯ

ಸಾಂಸ್ಕೃತಿಕ, ಧಾರ್ಮಿಕ ಮತ್ತು ವಿವಿಧ ಭಾಷೆಯ ಮೇಲೆ ನಿಂತಿರುತ್ತದೆ. ಯಾರಲ್ಲಿ ರಾಷ್ಟ್ರೀಯತೆ ಇದೆಯೋ ಅವರಿಗೆ ಪ್ರತಿಯೊಂದು ಸ್ಥಳದಲ್ಲಿ ಗೌರವ ಸಿಗುತ್ತದೆ. ಯಾವ ದೇಶದಲ್ಲಿ ಧಾರ್ಮಿಕ, ಸಾಮಾಜಿಕ, ರಾಜನೀತಿ ಹಾಗೂ ಸಾಂಸ್ಕೃತಿಕ ಒಂದು ಭಾಗವಾಗಿ ರಾಷ್ಟ್ರೀಯತೆ ಇರುವುದೋ ಆ ದೇಶದ ಗೌರವವು ಹೆಚ್ಚಾಗಿರುತ್ತದೆ. ಇಂತಹ ಅನೇಕ ದೇಶಗಳಿವೆ ಅದರಲ್ಲಿ ಭಾರತ ದೇಶವು ಒಂದು. ಭಾರತದಂತಹ ಅನೇಕ ದೇಶಗಳೂ ಇವೆ. ಅಲ್ಲಿಯೂ ಸಂಸ್ಕೃತಿ–ಸಂಸ್ಕಾರ, ಧಾರ್ಮಿಕತೆ ಹಾಗೂ ಅನೇಕ ಭಾಷೆಗಳ ವಿವಿಧತೆಯಿಂದ ಉನ್ನತ ಸ್ಥಾನದಲ್ಲಿವೆ. ಅಲ್ಲಿಯೂ ರಾಷ್ಟ್ರೀಯತೆ ವೈಭವ ತುಂಬಿಕೊಂಡಿದೆ. ದೇಶದ ಅಭಿವೃದ್ಧಿ ಹಾಗೂ ವಿಕಾಸಕ್ಕಾಗಿ ಪ್ರತಿಯೊಬ್ಬ ನಾಗರಿಕನ ಸಹಾಯ–ಸಹಕಾರ ಅವಶ್ಯವಾಗಿದೆ. ಎಲ್ಲರೂ ಒಂದಾಗಿ, ದೇಶಕ್ಕಾಗಿ ಶ್ರಮಿಸುವ ಭಾವನೆಯಿಂದ ರಾಷ್ಟ್ರೀಯತೆ ಹುಟ್ಟಿಕೊಳ್ಳುತ್ತದೆ. ಜಾತಿ, ಧರ್ಮ ಮತ್ತು ಪ್ರಾಂತೀಯ ಸಂಕುಚಿತ ಮಾನಸಿಕ ಭಾವನೆಯಿಂದ ಹೊರಬಂದು ಗರ್ವದಿಂದ ಎಲ್ಲರೂ ಒಂದೇ ಎನ್ನುವುದೆ ರಾಷ್ಟ್ರೀಯತೆ.

ಭಾರತದಲ್ಲಿ ಪತ್ರಿಕೋದ್ಯಮ ಮತ್ತು ರಾಷ್ಟ್ರೀಯತೆ ಒಂದೆ ನಾಣ್ಯದ ಎರಡು ಮುಖಗಳಿದ್ದಂತೆ. ಪತ್ರಿಕೋದ್ಯಮ ಮತ್ತು ರಾಷ್ಟ್ರೀಯತೆ ಬೇರ್ಪಡಿಸುವದು ಕಷ್ಟದ ಕಾರ್ಯ. ಎರಡೂ ಒಂದೇ ಉದ್ದೇಶ ಹೊಂದಿರುತ್ತವೆ. ಭಾರತೀಯ ಪತ್ರಿಕೋದ್ಯಮ ರಾಷ್ಟ್ರೀಯತೆಯ ನೆರಳಿನಲಿಯೇ ಕಾರ್ಯ ನಿರ್ವಹಿಸುತ್ತದೆ. ಸ್ವಾತಂತ್ರ್ಯದ ನಂತರ ಪಂಡಿತ ದೀನದಯಾಳ ಉಪಾಧ್ಯಾಯರು ಶ್ರೀ ಭಾವುರಾವ ದೇವರಸ ಅವರ ಪ್ರೇರಣೆಯಿಂದ ಲಖನೌ ನಗರದಲ್ಲಿ ೧೯೪೭ ರಲ್ಲಿ ರಾಷ್ಟ್ರಧರ್ಮ ಪ್ರಕಾಶನ ಸ್ಥಾಪಿಸಿದರು. ರಾಷ್ಟ್ರೀಯ ಪತ್ರಿಕೋದ್ಯಮ ವಿಸ್ತರಿಸುವುದೇ ಇದರ ಮುಖ್ಯ ಉದ್ದೇಶವಾಗಿತ್ತು. ಪಂಡಿತ ದೀನದಯಾಳ ಉಪಾಧ್ಯಾಯ ನಿಷ್ಠಾವಂತ ಹಾಗೂ ನಿರ್ಭಿತ ಪತ್ರಕಾರರಾಗಿದ್ದರು. ಅವರು ತಮ್ಮ ವಿಚಾರಗಳನ್ನು ಬಹಿರಂಗವಾಗಿ ಜನರ ಮುಂದೆ ವ್ಯಕ್ತಪಡಿಸುತ್ತಿದ್ದರು. ಪಂಡಿತ ದೀನದಯಾಲರ ಪತ್ರಿಕೋದ್ಯಮ ವ್ಯವಸ್ಥಿತವಾಗಿ ಆರಂಭವಾಗಿದ್ದು 'ರಾಷ್ಟ್ರಧರ್ಮ' (ಮಾಸಿಕ) ಮತ್ತು 'ಪಾಂಚಜನ್ಯ' (ಸಾಪ್ತಾಹಿಕ) ಪತ್ರಿಕೆಯ ಮುಖಾಂತರ 'ರಾಷ್ಟ್ರಧರ್ಮ' ದ ಮೊದಲನೆಯ ಅಂಕ ೩೧ ಅಗಷ್ಟ, ೧೯೪೭ ರಂದು ಮತ್ತು 'ಪಾಂಚಜನ್ಯ' ದ ಮೊದಲನೆಯ ಅಂಕ ೧೪ ಜನೇವರಿ, ೧೯೪೮ ರಲ್ಲಿ ಪ್ರಕಾಶಗೊಂಡವು. ಅದೆ ರೀತಿಯಾಗಿ 'ಸ್ವದೇಶ' (ದೈನಿಕ) ಪತ್ರಿಕೆಯ ಪ್ರಕಾಶನ ಆರಂಭವಾಯಿತು. ರಾಷ್ಟ್ರೀಯತೆಯ ಪ್ರಚಾರ–ಪ್ರಸಾರಕ್ಕಾಗಿ ರಾಷ್ಟ್ರಧರ್ಮ ಮತ್ತು ಪಾಂಚಜನ್ಯದ ಮಹತ್ವಪೂರ್ಣ ಪೀಠಿಕೆಯಾಗಿತ್ತು. ದೀನದಯಾಳ ಉಪಾಧ್ಯಾಯರು ಪತ್ರಿಕೋದ್ಯಮಕ್ಕೆ ತಮ್ಮ ವಿಚಾರಗಳ ಮಾಧ್ಯಮವನ್ನಾಗಿ ಮಾಡಿದ್ದರು. ಪತ್ರಿಕೋದ್ಯಮ ಜನಮತ ನಿರ್ಮಾಣ ಮಾಡುವದಕ್ಕಾಗಿ ಬಹಳಷ್ಟು ಸಹಾಯ ಮಾಡುತ್ತವೆ ಎಂಬುದನ್ನು ದೀನದಯಾಳ ಅವರು ಚನ್ನಾಗಿ ತಿಳಿದುಕೊಂಡಿದ್ದರು.

ಪಂಡಿತ ದೀನದಯಾಳ ಅವರ ಜನ್ಮ ೨೫ ಸಪ್ಟೆಂಬರ, ೧೯೧೬ ರಲ್ಲಿ ಚಂದ್ರಭಾನ, ಫರಾಹ, ಜಿಲ್ಹೆ ಮಥುರಾ, ಉತ್ತರ ಪ್ರದೇಶದಲ್ಲಿ ಆಯಿತು. ಅವರ ತಂದೆಯ ಹೆಸರು ಭಗವತಿ ಪ್ರಸಾದ ಉಪಾಧ್ಯಾಯ, ತಾಯಿ ರಾಮಪ್ಯಾರಿ, ದೀನದಯಾಳರಿಗೆ ತಮ್ಮ ಪರಿವಾರ ಸ್ನೇಹ ಬಹಳ ಸಮಯದವರೆಗೆ ಸಿಗಲಿಲ್ಲ. ಬಾಲ್ಯದಲ್ಲಿಯೇ ತಂದೆ-ತಾಯಿಗಳನ್ನು ಕಳೆದುಕೊಂಡರು. ಆಗ ಅವರ ವಯಸ್ಸು ಕೇವಲ ಎಂಟು ವರ್ಷ. ನಂತರ ಅವರ ಪಾಲನೆ-ಪೋಷಣೆ ಅಜ್ಜನ ಮನೆಯಲ್ಲಿ ಆಯಿತು. ಅವರ ಅಜ್ಜ ರಾಜಸ್ಥಾನದ ಧನಿಕಯಾದಲ್ಲಿ ರೇಲ್ವೆ ಮಾಸ್ಟರ ಆಗಿದ್ದರು. ದೀನದಯಾಳ ಅವರು ಹತ್ತು ವರ್ಷದವರಾಗುತ್ತಲೆ ಅಜ್ಜ ಸಹ ತೀರಿಕೊಂಡರು. ಅಜ್ಜ ತೀರಿಕೊಂಡ ನಂತರ ಮಾವನವರು ಇವರ ಪಾಲನೆ-ಪೋಷಣೆ ಮಾಡತೊಡಗಿದರು. ಅವರು ರಾಜಸ್ಥಾನದ ಗಂಗಾಪುರ ರೇಲ್ವೆ ಸ್ಟೇಷನಿನಲ್ಲಿ ಮಾಲಗಾರ್ಡ ಆಗಿ ಕಾರ್ಯನಿರ್ವಹಿಸುತ್ತಿದ್ದರು. ದೀನದಯಾಳ ಅವರ ಆರಂಭಿಕ ಶಿಕ್ಷಣ ಗಂಗಾಪುರದಲ್ಲಿಯೇ ಪೂರ್ಣಗೊಂಡಿತು. ನಂತರ ಸೀಕರ, ಕಾನಪುರ ಹಾಗೂ ಆಗರಾ ಮುಂತಾದ ಸ್ಥಳಗಳಲ್ಲಿ ತಮ್ಮ ಅಭ್ಯಾಸ ಪೂರ್ಣಗೊಳಿಸಿದರು. ಕಾಲೇಜಿನ ಅಭ್ಯಾಸ ಮಾಡುವಾಗಲೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಪರ್ಕದಲ್ಲಿ ಬಂದರು. ಅಲ್ಲಿ ಬಹಳಷ್ಟು ಶ್ರದ್ಧೆಯಿಂದ ಸಂಘದ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಕಾಲೇಜಿನ ಶಿಕ್ಷಣ ಮುಗಿಸಿ ಯಾವುದೆ ನೌಕರಿ ಅಥವಾ ವ್ಯಾಪಾರ ಕಡೆಗೆ ಮನಸ್ಸು ಮಾಡದೆ ಸ್ವಯಂ ಸೇವಕ ಸಂಘದಲ್ಲಿಯೇ ತಮ್ಮನ್ನು ತಾವು ತೊಡಗಿಸಿಕೊಂಡರು. ೧೯೩೭ ರಲ್ಲಿ ಕಾನಪುರದಲ್ಲಿ ತಮ್ಮ ಬಿ.ಎ ಅಧ್ಯಯನ ಮುಗಿಸಿ ಸಹಪಾಠಿಗಳಾದ ಶ್ರೀ ಬಾಲಾಜಿ ಮಹಾಸಬ್ದೆ ಮತ್ತು ಶ್ರೀ ಸುಂದರ ಸಿಂಹ ಭಂಡಾರಿ ಅವರ ಜೊತೆ ಗೂಡಿ ಸಮಾಜ ಸೇವೆ ಮಾಡತೊಡಗಿದರು. ಇದೆ ಸಂದರ್ಭದಲ್ಲಿ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್. ಎಸ್. ಎಸ್) ದ ಸಂಸ್ಥಾಪಕ ಡಾ. ಹೆಡಗೆವಾರ ಹಾಗೂ ಸಂಘದ ಕಾರ್ಯಕರ್ತರಾದ ಶ್ರೀ ಭಾಹುರಾವ ದೇವರಸ ಅವರ ಸಂಪರ್ಕದಲ್ಲಿ ಬಂದರು. ಆರ್. ಎಸ್. ಎಸ್. ದ ವಿಚಾರಧಾರೆಯ ಪ್ರಭಾವದಲ್ಲಿ ಬಂದು ಸಂಘ ಪರಿವಾರ ಕೂಡಿಕೊಂಡರು.

ಸಂಘದ ಶಿಕ್ಷಣ ಪಡೆಯುವದಕ್ಕಾಗಿ ೧೯೩೯ ರಲ್ಲಿ ೪೦ ದಿನಗಳ ಶಿಬಿರದಲ್ಲಿ ಭಾಗವಹಿಸಿದ್ದರು. ಈ ಶಿಬಿರ ನಾಗಪುರದಲ್ಲಿ ಇತ್ತು. ಅವರ ಮಾವನವರು ದೀನದಯಾಳ ಅವರ ವಿವಾಹಕ್ಕಾಗಿ ಅನೇಕ ಪ್ರಯತ್ನ ಮಾಡಿದರು. ಆದರೆ ಬಹು ಜಾಣತನದಿಂದ ಅವರ ಮದುವೆ ಮಾತು ತಳ್ಳಿ ಹಾಕಿದರು. ಬಹುಶಾ ರಾಷ್ಟ್ರದ ಸೇವೆಗಾಗಿಯೇ ಅವರ ಜನ್ಮವಾಗಿತ್ತು ಎಂದೆನಿಸುತ್ತದೆ. ಅದಕ್ಕಾಗಿ ಎಲ್ಲ ಬಂಧನಗಳಿಂದ ಮುಕ್ತವಾಗಿ ಭಾರತಾಂಬೆಯ ಆಶ್ರಯದಲ್ಲಿಯೇ ಬದುಕಿದರು. ಅವರು ಭಾರತೀಯ ಸಂಸ್ಕೃತಿ ಮತ್ತು ರಾಷ್ಟ್ರಕ್ಕಾಗಿ ಅನೇಕ ಕಾರ್ಯಗಳನ್ನು ಮಾಡಿದರು ೧೯೪೨ ರಲ್ಲಿ ಆರ್. ಎಸ್.

ಎಸ್ ದ ಪೂರ್ಣ ಪ್ರಚಾರಕರಾಗಿ ಸೇವೆ ಸಲ್ಲಿಸಿದರು. ೧೯೫೧ ರಿಂದ ೧೯೬೭ ರವರೆಗೆ ಭಾರತೀಯ ಜನಸಂಘದ ಅಧ್ಯಕ್ಷರಾಗಿದ್ದರು. ಮುಂದೆ ಇದೆ ಜನಸಂಘ ಭಾರತೀಯ ಜನತಾ ಪಾರ್ಟಿಯಾಯಿತು. ೧೧ ಫೆಬ್ರುವರಿ ೧೯೬೮ ರಂದು ಮುಗಲಸರಾಯ ರೇಲ್ವೆ ಸ್ಟೇಶನ ಹತ್ತಿರ ಅವರ ಮೃತ ಶರೀರ ಇತ್ತು. ಅವರ ಮೃತ್ಯುವಿನ ವಿಷಯ ಇಂದಿಗೂ ಅಸ್ಪಷ್ಟವಾಗಿದೆ. ಪಂಡಿತ ದೀನದಯಾಳ ಅವರು ರಾಷ್ಟ್ರೀಯ ಏಕತೆಯ ಸಮರ್ಥಕರಾಗಿದ್ದರು. ರಾಷ್ಟ್ರೀಯ ಏಕತೆ ಸಂಸ್ಕೃತಿಯ ಮುಖಾಂತರ ತರಬಹುದೆಂಬ ವಿಚಾರ ಅವರದ್ದಾಗಿತ್ತು. ಅವರ ದೃಷ್ಟಿಯಲ್ಲಿ ಪ್ರತಿಯೊಂದು ರಾಷ್ಟ್ರದ ಆತ್ಮವಿರುತ್ತದೆ. ಅದರಲ್ಲಿ ಅವರ ಸಂಸ್ಕೃತಿ ಒಳಗೊಂಡಿರುತ್ತದೆ. ಯಾವದೇ ರಾಜ್ಯ-ರಾಷ್ಟ್ರ ಆತ್ಮವಿಲ್ಲದ ಜೀವಂತವಾಗಿರಲು ಸಾಧ್ಯವಿಲ್ಲ. "ನಾವು ಏಕತೆಯನ್ನು ಕಾಣುವುದಾದರೆ ಭಾರತೀಯ ರಾಷ್ಟ್ರೀಯತೆಯಲ್ಲಿ ಕಾಣಬಹುದು. ಅದೇ ಹಿಂದು ರಾಷ್ಟ್ರೀಯತೆಯಾಗಿದೆ ಹಾಗೂ ಭಾರತೀಯ ಸಂಸ್ಕೃತಿಯೂ ಹಿಂದೂ ಸಂಸ್ಕೃತಿಯಾಗಿದೆ. ಅವೆಲ್ಲವುಗಳ ದರ್ಶನವಾಗಬೇಕು. ಅದಕ್ಕೊಂದು ಮಾನದಂಡವಿರಬೇಕು. ಭಾಗೀರಥಿಯ ಪುಣ್ಯಧಾರೆಯಲ್ಲಿ ಎಲ್ಲ ಪ್ರವಾಹಗಳ ಸಂಗಮವಾಗಲಿ. ಗಂಗೆ-ಯಮುನೆ ಎಲ್ಲವೂ ಒಂದೆ ಆಗಲಿ" (ಪಾಂಚಜನ್ಯ, ೨೪ ಅಗಷ್ಟ, ೧೯೫೩).

ಪಂಡಿತ ದೀನದಯಾಳ ಅವರು ಏಕತೆಗಾಗಿ ಪ್ರಜಾತಂತ್ರ ಅವಶ್ಯ ಎಂದು ಹೇಳುತ್ತಿದ್ದರು. "ಭಾರತದ ಪರಿಸ್ಥಿತಿಯಲ್ಲಿ ಪ್ರಜಾತಂತ್ರದ ರಾಷ್ಟ್ರೀಯ ಏಕತೆಯಲ್ಲಿ ಆಳವಾದ ಸಂಬಂಧವಿದೆ. ಆದರೆ ಪ್ರಜಾತಂತ್ರ ಸಮಾಪ್ತವಾದರೆ ಏಕತೆಯೂ ನಷ್ಟವಾಗುತ್ತದೆ. ಯಾರು ಪ್ರಜಾತಂತ್ರದ ಪದ್ಧತಿಯ ಅನುಕರಣೆ ಮಾಡುತ್ತಾರೋ ಅವರು ರಾಷ್ಟ್ರೀಯತೆಯಲ್ಲಿ ಧುಮುಕುತ್ತಾರೆ". (ಡಾ. ಮಹೇಶಚಂದ್ರ ಶರ್ಮಾ, ದೀನದಯಾಳ ಉಪಾದ್ಯಾಯ ಕೃತಿತ್ವ ಹಾಗೂ ವಿಚಾರ ಪು. ೧೮೨). ರಾಷ್ಟ್ರೀಯ ಏಕತೆಯನ್ನು ಗಟ್ಟಿಗೊಳಿಸುವದಕ್ಕಾಗಿ ರಾಷ್ಟ್ರದ ಸಾಂಸ್ಕೃತಿಕ ಏಕಾತ್ಮಕತೆಯ ಅವಶ್ಯಕತೆ ಇದೆ. ಎಂಬುದು ಪಂಡಿತ ದೀನದಯಾಳ ಅವರ ಅಭಿಪ್ರಾಯವಾಗಿತ್ತು. ಅವರ ಶಬ್ದಗಳು "ಭಾರತದಲ್ಲಿ ಒಂದೆ ಸಂಸ್ಕೃತಿ ಇರಲಿ, ಒಂದಕ್ಕಿಂತಲೂ ಅಧಿಕ ಸಂಸ್ಕೃತಿಯು ದೇಶವನ್ನು ತುಂಡು-ತುಂಡಾಗಿಸಿ ನಮ್ಮ ಜೀವನ ವಿನಾಶ ಮಾಡುತ್ತಿದೆ" (ರಾಷ್ಟ್ರಧರ್ಮ, ಶರದ ಪೂರ್ಣಿಮಾ ವಿ.ಸಂ ೨೦೦೭) ಭಾರತ ಅಖಂಡವಾಗಿ ಉಳಿಯಬೇಕಾದರೆ ನಾವೆಲ್ಲರೂ ಒಂದೇ ಸಂಸ್ಕೃತಿಯಲ್ಲಿ ಇರಬೇಕು ಎಂಬುದು ಅರಿವಾದಾಗ ಮಾತ್ರ ರಾಷ್ಟ್ರದ ಗೌರವ ಎತ್ತರಕ್ಕೆ ಹೋಗುತ್ತದೆ. ಸ್ವಾತಂತ್ರ್ಯದ ನಂತರ ಭಾರತೀಯರ ಮೇಲೆ ಪಾಶ್ಚಿಮಾತ್ಯರ ಸಂಸ್ಕೃತಿ ಹೆಚ್ಚಾಗಿದ್ದು ಇದೊಂದು ಅಪಾಯಕಾರಿ ಎಂದು ಹೇಳುತ್ತಾ ದೀನದಯಾಳ ಅವರು ಹೀಗೆ ಬರೆದಿದ್ದಾರೆ - "ರಾಷ್ಟ್ರ ಭಕ್ತಿಯ ಭಾವನೆಯನ್ನು ನಿರ್ಮಿಸುವುದು ಹಾಗೂ ಅದನ್ನು ಸಾಕಾರಗೊಳಿಸುವುದು ಕೇವಲ ರಾಷ್ಟ್ರೀಯ ಸಂಸ್ಕೃತಿಯಿಂದ ಮಾತ್ರ ಸಾಧ್ಯ. ಅದರಿಂದಲೇ ಸಂಕುಚಿತ ಸೀಮೆಯನ್ನು

ತಳ್ಳಿಹಾಕಿ ಮಾನವನ ಏಕಾತ್ಮಕತೆಯನ್ನು ಅನುಭವಿಸಬಹುದು. ಆದ್ದರಿಂದ ಸಂಸ್ಕೃತಿಯ ಸ್ವಾತಂತ್ರ್ಯತೆ ಪರಮಾವಶ್ಯಕವಾಗಿದೆ. ಅದಿಲ್ಲದೆ ರಾಷ್ಟ್ರದ ಸ್ವಾತಂತ್ರ್ಯತೆಗೆ ನಿರರ್ಥಕ ಹಾಗೂ ಅಪೂರ್ಣವಾಗಿರುವುದು" (ಪಾಂಚಜನ್ಯ, ಭಾದ್ರಪದ ಕೃಷ್ಣ ೯ ವಿ.ಸಂ ೨೦೦೬).

ಪಂಡಿತ ದೀನದಯಾಳ ಉಪಾಧ್ಯಾಯ ಅವರು ರಾಷ್ಟ್ರೀಯ ವಿಚಾರಧಾರೆಯ ಪ್ರಚಾರ-ಪ್ರಸಾರಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದರು. ತಮ್ಮ ಈ ಸಂಕಲ್ಪ ಪೂರ್ಣಗೊಳಿಸಲು ಜೀವನಪೂರ್ತಿ ಪ್ರಯತ್ನಿಸಿದರು. ಅವರು ಇಂತಹ ಪ್ರಯತ್ನದಲ್ಲಿಯೂ ಪತ್ರಿಕೋದ್ಯಮದ ಪ್ರವಾಹ ನಿಲ್ಲಿಸಲಿಲ್ಲ. ಸ್ವಾತಂತ್ರ್ಯದ ನಂತರ ಭಾರತದ ಪತ್ರಿಕೋದ್ಯಮ ಗುರಿ ಇಲ್ಲದಂತಾಗಿತ್ತು. ಆಗ ಪಂಡಿತ ದೀನದಯಾಲ ಅವರು ಪತ್ರಿಕೋದ್ಯಮಕ್ಕೆ ಸರಿಯಾದ ಮಾರ್ಗದರ್ಶನ ನೀಡಿದರು. ರಾಷ್ಟ್ರೀಯ ಪತ್ರಿಕೋದ್ಯಮಕ್ಕೆ ಅವರ ಸೇವೆ ಹಾಗೂ ಮಾರ್ಗದರ್ಶನ ಅನುಕರಣೀಯವಾಗಿದೆ.

■■

---

ಮುಖ್ಯಸ್ಥರು, ಹಿಂದಿ ವಿಭಾಗ, ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ, ಮೊ-೯೪೪೮೧೮೫೭೨೦೫.

ಕಳ್ಳಹಾಕಿ ಮಾನವನ ಏಕಾತ್ಮಕತೆಯನ್ನು ಅನುಭವಿಸಬಹುದು. ಆದ್ದರಿಂದ ಸಂಸ್ಕೃತಿಯ ಸ್ವಾತಂತ್ರ್ಯತೆ ಪರಮಾವಶ್ಯಕವಾಗಿದೆ. ಅದಿಲ್ಲದೆ ರಾಷ್ಟ್ರದ ಸ್ವಾತಂತ್ರ್ಯತೆಗೆ ನಿರರ್ಥಕ ಹಾಗೂ ಅಪೂರ್ಣವಾಗಿರುವುದು" (ಪಾಂಚಜನ್ಯ ಭಾದ್ರಪದ ಕೃಷ್ಣ ೯ ವಿ.ಸಂ ೨೦೦೬).

ಪಂಡಿತ ದೀನದಯಾಳ ಉಪಾಧ್ಯಾಯ ಅವರು ರಾಷ್ಟ್ರೀಯ ವಿಚಾರಧಾರೆಯ ಪ್ರಚಾರ-ಪ್ರಸಾರಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದರು. ತಮ್ಮ ಈ ಸಂಕಲ್ಪ ಪೂರ್ಣಗೊಳಿಸಲು ಜೀವನಪೂರ್ತಿ ಪ್ರಯತ್ನಿಸಿದರು. ಅವರು ಇಂತಹ ಪ್ರಯತ್ನದಲ್ಲಿಯೂ ಪತ್ರಿಕೋದ್ಯಮದ ಪ್ರವಾಹ ನಿಲ್ಲಿಸಲಿಲ್ಲ. ಸ್ವಾತಂತ್ರ್ಯದ ನಂತರ ಭಾರತದ ಪತ್ರಿಕೋದ್ಯಮ ಗುರಿ ಇಲ್ಲದಂತಾಗಿತ್ತು, ಆಗ ಪಂಡಿತ ದೀನದಯಾಲ ಅವರು ಪತ್ರಿಕೋದ್ಯಮಕ್ಕೆ ಸರಿಯಾದ ಮಾರ್ಗದರ್ಶನ ನೀಡಿದರು. ರಾಷ್ಟ್ರೀಯ ಪತ್ರಿಕೋದ್ಯಮಕ್ಕೆ ಅವರ ಸೇವೆ ಹಾಗೂ ಮಾರ್ಗದರ್ಶನ ಅನುಕರಣೀಯವಾಗಿದೆ.

■■

---

ಮುಖ್ಯಸ್ಥರು, ಹಿಂದಿ ವಿಭಾಗ, ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ, ಮೊ-೯೪೪೮೭೮೫೨೦೫.

‘ವಿವಿಧತೆಯಲ್ಲಿ ಏಕತೆ’ ಯನ್ನು ಹೊಂದಿದ ಪ್ರಪಂಚದ ಏಕೈಕ ರಾಷ್ಟ್ರ ಭಾರತ. ಹಲವು ಭಾಷೆ, ಜಾತಿ, ಹಲವಾರು ಧರ್ಮ, ಹಲವಾರು ನಂಬಿಕೆ – ಆಚರಣೆಗಳು, ವಿಭಿನ್ನ ಸಂಪನ್ಮೂಲಗಳಿಂದ ಕೂಡಿರುವುದು. ವಿಭಿನ್ನ ಸಂಪ್ರದಾಯ, ಆಚರಣೆಗಳಿಂದ ಪ್ರಾದೇಶಿಕವಾಗಿ ವ್ಯತ್ಯಾಸಗಳನ್ನು ಹೊಂದಿರುವುದು. ಆದರೆ ಸಮಗ್ರತೆ ಮತ್ತು ಸಮನ್ವಯತೆಯನ್ನು ಸಾಧಿಸಿಕೊಂಡಿದೆ. ಇದನ್ನೇ ಬಹುಮುಖಿ ಸಂಸ್ಕೃತಿಯ ಒಮ್ಮತದ ಪರಿಕಲ್ಪನೆ ಎನ್ನಬಹುದು. ಈ ಒಮ್ಮತ – ಏಕತೆ – ಸಹಬಾಳ್ವೆಯನ್ನೆ ನಾವು ರಾಷ್ಟ್ರೀಯತೆ ಎಂದು ಭಾರತದ ಸಂದರ್ಭದಲ್ಲಿ ಅರ್ಥೈಸಿಕೊಳ್ಳಬೇಕು. ಹೀಗೆ ಅರ್ಥೈಸಿಕೊಳ್ಳುವುದರೊಂದಿಗೆ ಆ ನಿಟ್ಟಿನಲ್ಲಿ ಬದುಕಬೇಕಾಗಿದೆ. ನಮ್ಮ ಪೂರ್ವಜರು ಸಹಬಾಳ್ವೆಗೆ – ಸಹಕಾರಕ್ಕೆ ಸರ್ವಧರ್ಮ ಸಮಷ್ಠಿ ಪ್ರಜ್ಞೆಗೆ ಸಾಕ್ಷಿಯಾಗಿದ್ದಾರೆ. ಇದನ್ನೆ ನಾವು ದೇಶ ಭಕ್ತಿಯ ಸಂದರ್ಭದಲ್ಲಿ ಬೇರು ಸಂಸ್ಕೃತಿ, ನೆಲ ಸಂಸ್ಕೃತಿ, ಪರಂಪರೆ, ಸಾಂಪ್ರದಾಯಿಕತೆ ಎನ್ನುತ್ತೇವೆ. ಇಂತಹ ರಾಷ್ಟ್ರೀಯತೆ ಮತ್ತು ಮಾಧ್ಯಮಗಳ ಕುರಿತು ವಿದ್ವತ್ತಪೂರ್ಣ ಲೇಖನಗಳ ಸಂಕಲನ ಇದಾಗಿದ್ದು. ಓದುಗರಿಗೆ ಹೊಸ ಹೊಳಹುಗಳನ್ನು ಮೂಡಿಸುತ್ತವೆ.

ದೆಹಲಿ ವಿಶ್ವವಿದ್ಯಾಲಯದ ಪಿ.ಜಿ.ಡಿ.ಎ.ವ್ಹಿ. ಕಾಲೇಜಿನಲ್ಲಿ “ಪ್ರಸಾರ ಮಾಧ್ಯಮಗಳು ರಾಷ್ಟ್ರವನ್ನು ಕಟ್ಟುವ ನಿಟ್ಟಿನಲ್ಲಿ ಎಷ್ಟೊಂದು ಯಶಸ್ವಿಯಾಗುತ್ತಿದೆ? ಆಗಬೇಕು” ಎಂಬುದನ್ನು ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿರುವುದರ ಪ್ರತಿಫಲವೇ ಈ ಸಂಕಲನ ಕೃತಿ ಪ್ರಕಟವಾಗಿದೆ. ೨೬ ಮತ್ತು ೨೭-೦೪-೨೦೧೮ ರಂದು ‘ಮಾಧ್ಯಮ, ಸಾಹಿತ್ಯ-ರಾಷ್ಟ್ರೀಯತೆ’ ಎಂಬ ವಿಷಯದ ಮೇಲೆ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಿ ಅಲ್ಲಿ ಮಂಡಿಸಿ, ಆಯ್ಕೆಯಾದ ಪ್ರಬಂಧಗಳನ್ನು **‘ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ’** ಎಂಬ ಕೃತಿಯನ್ನು ಸಂಕಲಿಸಿ, ತುಂಬಾ ಅರ್ಥಪೂರ್ಣವಾಗಿ ಹಾಗೂ ಶಿಸ್ತು ಬದ್ಧವಾಗಿ ಈ ಕೃತಿಯು ಸಂಪಾದಿತಗೊಳಿಸಿರುವರು. ಈ ಸಂಪಾದಿತ ಕೃತಿ ಸಾಹಿತ್ಯ ಲೋಕಕ್ಕೆ ಹೊಸ ಚಿಂತನೆಗಳು ಹಾಗೂ ಚರ್ಚೆಗಳೊಂದಿಗೆ ಸೇರ್ಪಡೆಯಾಗಿರುವುದು.

**ಡಾ. ಹರೀಶ ಅರೋಡಾ, ದೆಹಲಿ**

978-93-83813-40-7

ISBN 978-93-83813-40-7

**ಸೌಮ್ಯ ಪ್ರಕಾಶನ, ವಿಜಯಪುರ**